
'ಹೇಮಲತೆ ಪ್ರಭಾಕರ' ಕನ್ನಡದ ಆದ್ಯ ಸ್ವತಂತ್ರ ಸಾಮಾಜಿಕ ಕಾದಂಬರಿಗಳಲ್ಲಿ ಗಣ್ಯವಾದ ಒಂದು ಕೃತಿಯಾಗಿದೆ. ಇದು ಕ್ರೈಸ್ತ ಮತ ಪ್ರಚಾರದ ಸನ್ನಿವೇಶಗಳನ್ನು, ಅದರ ಪ್ರಕ್ರಿಯೆ, ಪರಿಣಾಮ ಇತ್ಯಾದಿಗಳನ್ನು ದಾಖಲಿಸಿರುವ ಕಾರಣಕ್ಕೆ ಸಾಂಸ್ಕೃತಿಕ ಮಹತ್ವವನ್ನೂ ಪಡೆದಿದೆ. ಕನ್ನಡದಲ್ಲಿ ಬಂದ ಎರಡು ಸೃಜನಶೀಲ ಕ್ರೈಸ್ತ ಕಾದಂಬರಿಗಳೆಂದರೆ ರೆ.ಮ್ಯೋಗ್ಲಿಂಗ್ ಅವರ 'ಈರಾರು ಪತ್ರಿಕೆ' (1948) ಮತ್ತು ಸವಣೂರರ 'ಹೇಮಲತೆ ಪ್ರಭಾಕರ'. 'ಈರಾರು ಪತ್ರಿಕೆ' ಘಟನೋತ್ತರವಾಗಿ ಮತಾಂತರದ ಸಮರ್ಥನೆಯ ಸ್ವರೂಪದಲ್ಲಿದ್ದರೆ ಈ ಕಾದಂಬರಿ ಮತಾಂತರ ಪ್ರಕ್ರಿಯೆಯ ಒಳಗೆ ನಿಂತು ದಾಖಲಿಸಿದೆ.

ಮಿಷನರಿ ಸಾಹಿತ್ಯವು ಹಿಂದೂ ಸಮಾಜದ ದೋಷಗಳನ್ನು ಎತ್ತಿತೋರಿಸಿ ಸಮಾಜ ಸುಧಾರಣೆಗೆ ಕಾರಣವೂ ಆಗಿದೆ. 'ಹೇಮಲತೆ ಪ್ರಭಾಕರ' ಕಾದಂಬರಿ ಆ ಕಾಲಘಟ್ಟದಲ್ಲಿ ಬಂದ ಒಂದು ಐತಿಹಾಸಿಕ ಮಹತ್ವದ ಕೃತಿಯಾಗಿದೆ.

'ಹೇಮಲತೆ ಪ್ರಭಾಕರ' ಕಾದಂಬರಿಯ ಶೀರ್ಷಿಕೆ ಪ್ರಾರಂಭ ಕಾಲದ ಕಾದಂಬರಿಗಳ 'ನಾಯಕಿ ಪ್ರಧಾನ' ಶೀರ್ಷಿಕೆಗಳಿಗಿಂತ ಭಿನ್ನವಾಗಿ ಹೆಣ್ಣು ಮತ್ತು ಗಂಡಿನ (ನಾಯಕಿ - ನಾಯಕನ) ಹೆಸರನ್ನು ಹೊಂದಿದೆ. ನಾಯಕಿ ಹೇಮಲತೆ ಯುವ ವಿಧವೆ; ಅವಳಿಗೆ ಕೇವಲ ಐದು ವರ್ಷ ಆಗಿದ್ದಾಗ 65 ವರ್ಷ ವಯಸ್ಸಿನ ಹನುಮಂತರಾಯ ಎಂಬ ಶ್ರೀಮಂತ ಅನಾರೋಗ್ಯಪೀಡಿತ ಜಹಗೀರುದಾರನ ನಾಲ್ಕನೆಯ ಹೆಂಡತಿಯಾಗಿ ಬಾಲ್ಯವಿವಾಹಕ್ಕೆ ಬಲಿಯಾಗಿದ್ದಳು. ಅವಳ ತಂದೆ ಜನಾರ್ದನಾಚಾರ್ಯನಿಗೆ ಅವರ ಬಳಿ ನಾಲ್ಕು ಸಾವಿರ ರೂಪಾಯಿಗಳ ಸಾಲ ಇದ್ದು, ಮಗಳನ್ನು ಮದುವೆ ಮಾಡಿಕೊಟ್ಟರೆ ಸಾಲ ಮನ್ನಾ ಮಾಡುವೆನೆಂದು ಜಹಗೀರುದಾರ ಹೇಳಿದ್ದನಂತೆ. ಮದುವೆಯಾದ ಒಂದೇ ವರ್ಷದಲ್ಲಿ ಜಹಗೀರುದಾರ ಗಂಡ ತೀರಿಕೊಂಡಿದ್ದ. ಅದು ತವರುಮನೆಯವರಿಗೆ ಗೊತ್ತಾದದ್ದು ಎಂಟು ವರ್ಷಗಳ ನಂತರ! ಹೀಗೆ ತಡವಾಗಿ ತಿಳಿಯಲು ಕಾರಣವೇನು ಎನ್ನುವುದಕ್ಕೆ ಕಾದಂಬರಿಯಲ್ಲಿ ಉತ್ತರವಿಲ್ಲ. ಹಿಂದೂಸ್ಥಾನದ ಹಿಂದುಳಿದಿರುವಿಕೆಯನ್ನು ತೋರಿಸಲು ಈ ಸಂದರ್ಭವನ್ನು ಸೃಷ್ಟಿಸಿರಬಹುದು.


Hemalatha
and
Prabhakara

ಹೇಮಲತೆ ಪ್ರಭಾಕರ

First Edition—1,000 Copies.

BANGALORE:
Printed for the Tract and Book Society,
at the
Wesleyan Mission Press, Mysore.
1904.
Price Four annas.]

ಬೇರೆ ಹಲವು ಸಂದರ್ಭಗಳಲ್ಲಿ ಪತ್ರಗಳನ್ನು ಅತ್ತಿಂದಿತ್ತ ಬರೆದುಕೊಳ್ಳುವುದು ಈ ಕಾದಂಬರಿಯಲ್ಲಿ ನಡೆಯುತ್ತಾ ಇರುತ್ತದೆ. ಬೆಂಗಳೂರಿನಲ್ಲಿ ಸಮೀಪದಲ್ಲೇ ಇರುವ ಮಿಸ್ ಮತ್ತು ಹೇಮಲತೆ ಪರಸ್ಪರ ಪತ್ರ ಬರೆಯುತ್ತಿರುತ್ತಾರೆ, ಮದ್ರಾಸಿಗೆ ಹೋದ ಪ್ರಭಾಕರ ತಕ್ಷಣ ಬೆಂಗಳೂರಿನ ಗೆಳೆಯನಿಗೆ ಪತ್ರ ಬರೆಯುತ್ತಾನೆ. ಜನಾರ್ದನಾಚಾರ್ಯನಿಗೆ ಪ್ಲೇಗ್ ತಗುಲಿದಾಗ ಹಳ್ಳಿಯಲ್ಲಿದ್ದ ಅವನ ಪತ್ನಿ ಕಾಶೀಬಾಯಿಗೆ ತಂತೀಸಮಾಚಾರ ಕಳುಹಿಸುತ್ತಾರೆ. ಇಷ್ಟೆಲ್ಲ ಇದ್ದರೂ ಹೇಮಲತೆಯ ಗಂಡ ತೀರಿಕೊಂಡ ಸಂಗತಿ ಎಂಟು ವರ್ಷಗಳ ಕಾಲ ಅವರಿಗೆ ತಿಳಿದಿರುವುದಿಲ್ಲ ಎನ್ನುವುದು ವಿಚಿತ್ರವಾಗಿದೆ.

ಅಲ್ಲದೆ, ಹೇಮಲತೆಯ ತಂದೆ ಜನಾರ್ದನಾಚಾರ್ಯ ತ್ರಿಲೋಕಸಂಚಾರಿ, ಮುದುಕರಾದ ಶ್ರೀಮಂತರಿಗೆ ಮೂರನೆಯ ನಾಲ್ಕನೆಯ ಮದುವೆಗಳಿಗೆ ಬಾಲಿಕಾ ವಧುಗಳನ್ನು ಗೊತ್ತುಮಾಡಿ ಹಣಸಂಪಾದಿಸಲು